ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: 19

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE : 29/12/20

**ದೇಶದ ಪ್ರಥಮ ಸ್ಮಾರ್ಟ್ ವ್ಯವಸ್ಥೆ ಪ್ರಧಾನಿಯಿಂದ ಹಸಿರು ನಿಶಾನೆ**

# ಚಾಲಕರಹಿತ ಮೆಟ್ರೋ ರೈಲು

**ನವದೆಹಲಿ:** ದೇಶದ ಮೊದಲ ಚಾಲಕರಹಿತರೈಲಿಗೆ ಪ್ರಧಾನಿ ನರೇಂದ್ರ ಮೋದಿ ಸೋಮವಾರ ಚಾಲನೆ ನೀಡಿದ್ದಾರೆ. ದೆಹಲಿ ಮೆಟ್ರೋದ ಮೆಜೆಂಟಾ ಲೈನ್‌ನಲ್ಲಿ (ಜನಕಪುರಿ ಪಶ್ಚಿಮದಿಂದ ಬೊಟಾನಿಕಲ್ ಗಾರ್ಡನ್) ಈ ರೈಲು ಸಂಚರಿಸಲಿದೆ. ಏರ್‌ಪೋರ್ಟ್ ಎಕ್ಸ್‌ಪ್ರೆಸ್ ಲೈನ್‌ನಲ್ಲಿ ನ್ಯಾಷನಲ್ ಕಾಮನ್ ಮೊಬಿಲಿಟಿ ಕಾರ್ಡ್‌ನ (ಎನ್‌ಸಿಎಂಸಿ) ಸಂಪೂರ್ಣ ಅನುಷ್ಠಾನ ಪ್ರಕ್ರಿಯೆಗೆ ಕೂಡ ಪ್ರಧಾನಿ ವಿಡಿಯೋ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಿದರು. ಚಾಲಕ-ರಹಿತ ರೈಲಿನ ಉದ್ಘಾಟನೆಯು ಭಾರತ ವೇಗವಾಗಿ ಸ್ಮಾರ್ಟ್ ವ್ಯವಸ್ಥೆಯತ್ತ ಸಾಗುತ್ತಿರುವುದರ ದ್ಯೋತಕವಾಗಿದೆ ಎಂದು ಪ್ರಧಾನಿ ಹೇಳಿದರು. ಮೆಟ್ರೋ ಸೇವೆಗಳ ವಿಸ್ತರಣೆಯಲ್ಲಿ ಮೇಕ್ ಇನ್ ಇಂಡಿಯಾ ಪ್ರಕ್ರಿಯೆ ಮಹತ್ವದ ಪಾತ್ರ ನಿರ್ವಹಿಸುತ್ತದೆ. ಇದರಿಂದ ವೆಚ್ಚ ಕಡಿಮೆಯಾಗುತ್ತದೆ. ಹೆಚ್ಚು ಭಾರತೀಯರಿಗೆ ಉದ್ಯೋಗ ಲಭ್ಯವಾಗುತ್ತದೆ ಎಂದು ಮೋದಿ ಹೇಳಿದರು.





ಚಿತ್ರ: ಪತ್ರಿಕೆ

**7ರ ಗುಂಪಿಗೆ ಭಾರತ**

**ಮೆಜೆಂಟಾ ಲೈನ್‌ನಲ್ಲಿ ಚಾಲಕ-ರಹಿತ ರೈಲುಗಳ ಸೇವೆ ಆರಂಭಿಸುವುದರೊಂದಿಗೆ ದೆಹಲಿ ಮೆಟ್ರೋ ರೈಲು ನಿಗಮ (ಡಿಎಂಆರ್‌ಸಿ) ಚಾಲಕರಿಲ್ಲದೆ ಟ್ರೇನ್‌ಗಳು ಸಂಚರಿಸುವ ಜಗತ್ತಿನ ಶೇ. 7ರ ಗುಂಪಿಗೆ ಸೇರ್ಪಡೆಯಾಗಿದೆ.**

- ಚಾಲಕರಹಿತ ರೈಲು ಸಂಚರಿಸಲಿರುವ ಮೆಜೆಂಟಾ ಲೈನ್ ಮಾರ್ಗದ ಉದ್ದ 37 ಕಿಲೋ. ಮೀಟರ್.
- 2021ರ ಮಧ್ಯಭಾಗದೊಳಗೆ 57 ಕಿ.ಮೀ. ಉದ್ದದ ಪಿಂಕ್ ಲೈನ್‌ನಲ್ಲೂ ಈ ಸೇವೆ ಲಭ್ಯ.
- ಒಟ್ಟು 94 ಕಿಮೀ ಮಾರ್ಗದಲ್ಲಿ ಚಾಲಕರಹಿತ ರೈಲುಗಳು ಓಡಲಿವೆ. ಇದು ದೆಹಲಿ ಮೆಟ್ರೋ ಜಾಲದ ಶೇಕಡ 9ರಷ್ಟಾಗಲಿದೆ.
- ಸೋಮವಾರ ಆರಂಭವಾದ ಟ್ರೇನ್‌ನಲ್ಲಿ ಆರು ಬೋಗಿಗಳಿರುತ್ತವೆ. ದೋಷ ಪತ್ತೆಗೆ ಅತ್ಯಾಧುನಿಕ ಕ್ಯಾಮರಾಗಳನ್ನು ಅಳವಡಿಸಲಾಗಿದೆ.